ಅಂತೂ ನನ್ನನ್ನು ಬಾಲನಟಿಯಾಗಿ ಮಾಡಬೇಕೆನ್ನುವ ಅಪ್ಪನ ಕನಸು ಕನಸಾಗಿ ಉಳಿಯದೆ ನನಸಾಗಿತ್ತು. ಆರು ವರ್ಷದ ವಯಸ್ಸಿನಲ್ಲಿ ನಾನು ಮುಖಕ್ಕೆ ಬಣ್ಣ ಹಚ್ಚಿದ್ದೆ. 'ಲೆದರ್‌ಫೇಸ್' ಎನ್ನುವ ಚಿತ್ರದ ನಿರ್ದೇಶಕ ವಿಜಯ್ ಭಟ್ ನನ್ನ ಅಗಲವಾದ ಕಣ್ಣುಗಳನ್ನು ನೋಡಿ 'ನೀನು ಮೀನಿನಂಥ ಕಣ್ಣುಳ್ಳುವಳಾಗಿದ್ದೀಯ. ಆದ್ದರಿಂದ ನಾನು ನಿನ್ನನ್ನು ಮೀನಾ ಅಂತ ಕರೆಯುತ್ತೇನೆ. ಇನ್ನು ಮೇಲೆ ಸಿನಿಮಾ ತೆರೆಯಲ್ಲಿ ನೀನು ಮೀನಾ ಎಂದೇ ಗುರುತಿಸಲ್ಪಡುತ್ತೀಯ...' ಎಂದಿದ್ದರು. ನಾನು ಆ ಚಿತ್ರದಲ್ಲಿ ಶ್ರಮಪಟ್ಟು ಹೃದಯಪೂರ್ವಕವಾಗಿಯೇ ನಟಿಸಿದ್ದೆ. ಸಿನಿಮಾ ಪೂರ್ತಿಯಾದ ಮೇಲೆ ಅಪ್ಪನನ್ನು ಕುರಿತು 'ಅಲಿಭಕ್ಸ್ ನಿನ್ನ ಮಗಳಲ್ಲಿ ಅದ್ಭುತವಾದ ನಟನಾ ಪ್ರತಿಭೆಯಿದೆ. ಇವಳು ಮುಂದೆ ಒಂದಲ್ಲ ಒಂದು ದಿನ ಮುಂಬಯಿಯ ಬೆಳ್ಳಿತೆರೆಯನ್ನು ಆಳುತ್ತಾಳೆ. ನಿನ್ನ ಭಾಗ್ಯದ ಬಾಗಿಲು ತೆರೆದುಕೊಳ್ಳುವ ದಿನಗಳು ದೂರವಿಲ್ಲ...' ಎಂದು ಹೇಳಿದ್ದರು ನಿರ್ದೇಶಕ ವಿಜಯ್ ಭಟ್. ಅಪ್ಪನ ಮುಖದಲ್ಲಿ ಅಂದು ಗೆಲುವಿನ ಮಂದಹಾಸ ಮೂಡಿದ್ದನ್ನು ನಾನು ಗಮನಿಸಿದ್ದೆ. 'ಲೆದರ್ ಫೇಸ್' ಸಿನಿಮಾ ಗೆದ್ದಿತ್ತು. ನನಗೆ ಸಾಲು ಸಾಲು ಅವಕಾಶಗಳು ಒದಗಿ ಬಂದಿದ್ದವು. ನನಗಾಗಿಯೇ ಸಿನಿಮಾಗಳಲ್ಲಿ ಬಾಲ ಪಾತ್ರಗಳನ್ನು ಸೃಷ್ಟಿ ಮಾಡುತ್ತಿದ್ದರು. ಪುರಾಣ ಚಿತ್ರಗಳಲ್ಲಿ ನನಗೆ ದೇವತೆಗಳ ಪಾತ್ರ ಗ್ಯಾರಂಟಿಯಾಗಿರುತ್ತಿತ್ತು. ಎರಡೇ ವರ್ಷದಲ್ಲಿ ಹತ್ತದಿನ್ನೈದು ಸಿನಿಮಾಗಳಲ್ಲಿ ನಟಿಸಿದ್ದೆ. ಸಿನಿಮಾವೊಂದಕ್ಕೆ ಹತ್ತು ಸಾವಿರ ರೂಪಾಯಿಗಳ ಸಂಭಾವನೆಯನ್ನು ಪಡೆಯತೊಡಗಿದ್ದೆ! ನನ್ನ ದುಡಿಮೆಯಿಂದಾಗಿ ಮನೆಯಲ್ಲಿ ಸುಖ, ಶಾಂತಿ, ನೆಮ್ಮದಿ, ಸಂಭ್ರಮಗಳು ನೆಲೆಯಾಗತೊಡಗಿದ್ದವು. ಬಾಲ ನಟಿಯಾಗಿ ನಾನು ತುಂಬಾ ಬಿಜಿಯಾಗಿಬಿಟ್ಟಿದ್ದೆ. ಕ್ರಮೇಣ ನಾನು ಬಾಲ್ಯದಲ್ಲಿ ನಡೆದಾಡಿದ ರಸ್ತೆಗಳು, ನೆರೆಹೊರೆಯವರು, ಬಡತನ ಎಲ್ಲವೂ, ಎಲ್ಲರೂ ದೂರವಾಗ ತೊಡಗಿದ್ದರು. ಸಿನಿಮಾದ ದೃಶ್ಯಗಳೇ ನನ್ನ ನಿಜ ಜೀವನದ ದೃಶ್ಯಗಳೂ ಆಗಿರುತ್ತಿದ್ದವು ಒಮ್ಮೊಮ್ಮೆ.

ಬಾಲೆಯಾಗಿದ್ದ ನಾನು ಕಡೆಗೊಂದು ದಿನ ಹೆಣ್ಣಾಗಿಬಿಟ್ಟೆ. ಈ ವೇಳೆಗಾಗಲೇ ನಾನು ಅಭಿನಯದಲ್ಲಿ ಪಳಗಿಬಿಟ್ಟಿದ್ದೆ. ಅಂದು ಸ್ಟುಡಿಯೋದಲ್ಲಿ ಬಣ್ಣ ಹಚ್ಚಿಕೊಂಡು ಕ್ಲೈಮ್ಯಾಕ್ಸ್ ದೃಶ್ಯಗಳಲ್ಲಿ ಪಾಲ್ಗೊಂಡಿದ್ದೆ. ದೇಹ ಬಿಸಿಯಾಗಿತ್ತು. ಬೆವರು ಮೂಡಿತ್ತು. ಒಂದು ರೀತಿಯ ಸುಸ್ತು ಆವರಿಸಿಕೊಂಡಿತ್ತು. ನಾನು ಋತುಮತಿಯಾಗಿದ್ದೆ. ಸೆಟ್‌ನಲ್ಲಿ ಮಂಕಾಗಿ ಕುಳಿತಿದ್ದೆ. ನನ್ನ ಬಳಿ ಬಂದ ಅಪ್ಪನ ಕಿವಿಯಲ್ಲಿ ಸುದ್ದಿಯನ್ನು ಉಸುರಿದ್ದೆ. ಅಪ್ಪ ನನ್ನ ಕಿವಿಯಲ್ಲಿ 'ಮಗಳೇ ಇನ್ನೆರಡು ಮೂರು ಗಂಟೆಗಳ ಕಾಲ ಸುಧಾರಿಸಿಕೋ. ಕ್ಲೈಮ್ಯಾಕ್ಸ್ ದೃಶ್ಯಗಳೊಂದಿಗೆ ಇಂದು ಚಿತ್ರೀಕರಣ ಕೂಡ ಕೊನೆಗೊಳ್ಳುವುದಿದೆ. ಈಗ ನಿನ್ನಿಂದಾಗಿ ಚಿತ್ರೀಕರಣಕ್ಕೆ ತೊಂದರೆಯಾದರೆ ಡೈರೆಕ್ಟರ್ ಕೋಪಿಸಿಕೊಂಡಾರು...' ಎಂದು ಹೇಳಿ ಸುಸ್ತು ನಿವಾರಿಸುವ ಗುಳಿಗೆಯೊಂದನ್ನು ಕೊಟ್ಟಿದ್ದ.

ಅಪ್ಪ ಕೊಟ್ಟ ಗುಳಿಗೆಯನ್ನು ನುಂಗಿ ಮೂರು ಗಂಟೆಗಳ ಕಾಲ ನಿರಂತರವಾಗಿ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದೆ. ಅಂದು ಚಿತ್ರೀಕರಣ ಪೂರ್ಣಗೊಂಡಾಗ ನಿರ್ದೇಶಕರು ಹೇಳಿದ್ದರು: 'ಮೀನಾ ಇಂದು ನಿನ್ನ ನಟನೆ ಅತ್ಯಂತ ಸಹಜವಾಗಿ ಅಮೋಘವಾಗಿ ಮೂಡಿ ಬಂತು. ನನಗೆ ಗೊತ್ತು, ನೀನು ಇಂದು ಹೆಣ್ಣಾಗಿದ್ದೀಯೆಂದು. ಹೆಣ್ಣೆಂದರೆ ಭೂಮಿ ಇದ್ದಂತೆ ಎಂಥಾ ಭಾರವನ್ನಾದರೂ ಹೊರುವಂಥ ಗುಣ ಭೂಮಿಗೆ ಇದೆ. ಇನ್ನು ಮೇಲೆ ನಿನಗೆ ಒಳ್ಳೊಳ್ಳೆಯ ನಾಯಕಿ ಪಾತ್ರಗಳು ಸಿಗುತ್ತವೆ ಮತ್ತು ಅವುಗಳನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸುತ್ತೀಯೆಂಬ ನಂಬಿಕೆ ಕೂಡ ನನಗಿದೆ. ಈ ಮುಂಬಯಿಯ ರಸ್ತೆಗಳಲ್ಲಿ ನಿನ್ನನ್ನು ನೋಡಲು ಜನ ಮುಗಿಬೀಳುವಂಥ ದಿನಗಳು ದೂರವಿಲ್ಲ....' ಅವರು ಮನಸಾರೆ ಹರಸಿದ್ದರಲ್ಲದೆ ನನ್ನ ನಟನೆಗೆ ಕೊಡಬೇಕಾಗಿದ್ದ ಸಂಭಾವನೆಗಿಂತ ಎರಡು ಸಾವಿರ ರೂಪಾಯಿಗಳನ್ನು ಹೆಚ್ಚಾಗಿ ಕೊಟ್ಟಿದ್ದರು. ಅಪ್ಪನ ಕಣ್ಣಲ್ಲಿ ಕೋಟಿ ಕನಸುಗಳು ಕುಣಿದಾಡುತ್ತಿದ್ದದ್ದು ನನ್ನ ಕಣ್ಣಿಗೆ ಬಿದ್ದಿತ್ತು. ಅಂದು ರಾತ್ರಿ ಅಮ್ಮನ ಮಡಿಲಲ್ಲಿ ಬಿಕ್ಕಿ ಬಿಕ್ಕಿ ಅತ್ತಿದ್ದೆ. ಅಮ್ಮ ಕೂಡ ಕಣ್ಣು ತೇವ ಮಾಡಿ ಕೊಂಡು ಹೇಳಿದ್ದಳು: 'ಮಗಳೇ ನೋಡ ನೋಡುತ್ತಲೇ ನೀನು ಎಷ್ಟು ಬೇಗ ಹೆಣ್ಣಾಗಿಬಿಟ್ಟೆ. ಹೆಣ್ಣಾಗಿ ಭೂಮಿ ಮೇಲೆ ಹುಟ್ಟಬಾರದು ಮಗಳೆ. ಆದರೆ ಏನು ಮಾಡುವುದು ಹುಟ್ಟು, ಸಾವು ಯಾವುದೂ ನಮ್ಮ ಕೈಯಲ್ಲಿ ಇಲ್ಲವಲ್ಲ...'

ಕೋಟಿ ನಕ್ಷತ್ರಗಳ ಸಂಗಡಿಗನೇ ನಾನು ಋತುಮತಿಯಾದ ಕ್ಷಣದಿಂದಲೇ ನನ್ನ ದೇಹದಲ್ಲಿ ಯೌವ್ವನ ಮತ್ತು ಆಕರ್ಷಣೆಗಳು ಮನೆ ಮಾಡಿಬಿಟ್ಟಿದ್ದವು. ಋತುಮತಿಯಾಗುವುದೆಂದರೆ, ಸಾಕ್ಷಾತ್ ಹೆಣ್ಣಾಗುವುದೆಂದು ಅರ್ಥ. ಹೆಣ್ಣು ಎಂದರೆ ಪ್ರೀತಿ. ಹೆಣ್ಣು ಎಂದರೆ ಮೋಹ. ಹೆಣ್ಣು ಎಂದರೆ ಸುಖ. ಹೆಣ್ಣು ಎಂದರೆ ಭೋಗ. ಹೆಣ್ಣು ಎಂದರೆ ಸೃಷ್ಟಿ. ಹೆಣ್ಣು ಎಂದರೆ ಹೆಣ್ಣು. ಹೆಣ್ಣು ಎಂದರೆ ಸಂಪತ್ತು. ಹೆಣ್ಣು ಎಂದರೆ ಹೊನ್ನು, ಮಣ್ಣಿಗಿಂತಲೂ ಮಿಗಿಲಾದದ್ದು. ನಾನು ಹೆಣ್ಣಾಗಿದ್ದೆ ಆ ಬಗ್ಗೆ ನನಗೆ ಅಭಿಮಾನವಿತ್ತು. ನನಗೆ ಯೌವ್ವನವಿತ್ತು; ಯೌವ್ವನವಿದ್ದರೇನೇ ಹೆಣ್ಣಿಗೆ ಬೆಲೆ. ನನಗೆ ಸೌಂದರ್ಯವಿತ್ತು; ಸೌಂದರ್ಯ ವಿದ್ದರೇನೇ ಹೆಣ್ಣಿಗೆ ಬೆಲೆ. ನಾನು ಮಾದಕವಾಗಿದ್ದೆ; ಮಾದಕತೆಯಿದ್ದರೇನೇ ಹೆಣ್ಣಿಗೆ ಬೆಲೆ. ನನ್ನ ದೇಹದಲ್ಲಿ ಪರಿಮಳವಿತ್ತು; ಪರಿಮಳವಿದ್ದರೇನೇ ಹೆಣ್ಣಿಗೆ ಬೆಲೆ. ನಾನು ಬೆಳ್ಳಿ ತೆರೆಯ ತಾರೆಯಾಗಿದ್ದೆ. ಮುಂಬಯಿಯ ಬೀದಿಯೊಂದರ ಸಾಮಾನ್ಯಳಾಗಿದ್ದ ನಾನು ಇದೀಗ ಮುಂಬಯಿಯ ಬೀದಿಗಳ ಲಕ್ಷಾಂತರ ಕೈಗಳಿಗೆ ಎಟುಕದೆ ಮೇಲೆ ಮೇಲೆ ಆಗಸದಲ್ಲಿ ತೇಲಾಡುತ್ತಿದ್ದೆ. ನಾನು ನಾಯಕಿಯಾಗಿ ಮಾಡಿದ ಚಿತ್ರಗಳನ್ನು ನೋಡಲು ಮುಂಬಯಿಯ ಜನ ಥಿಯೇಟರ್‌ಗಳಿಗೆ ಮುಗಿಬೀಳುತ್ತಿದ್ದರು.

ಮುಂಬಯಿಯ ಹೆಂಗಳೆಯರ ಹೃದಯಗಳಲ್ಲಿ ನಾನು ಪ್ರತಿಷ್ಠಾಪಿಸಲ್ಪಟ್ಟಿದ್ದೆ. ದುರಂತ ನಾಯಕಿಯ ಪಾತ್ರಗಳಲ್ಲಿ ನನ್ನನ್ನು ಜನ ಹೆಚ್ಚು ಇಷ್ಟಪಡತೊಡಗಿದರು. ನಿರ್ಮಾಪಕರು ಮತ್ತು ನಿರ್ದೇಶಕರು ಕೂಡ ನನಗಾಗಿಯೇ ದುರಂತ ಚಿತ್ರಕಥೆಗಳನ್ನು ಆಧರಿಸಿದ ಚಿತ್ರಗಳನ್ನು ನಿರ್ಮಿಸತೊಡಗಿದ್ದರು. ನಾನು ನಟಿಸಿದ ಅನೇಕ ಚಿತ್ರಗಳು ನನಗೆ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ತಂದುಕೊಟ್ಟಿದ್ದವು. ನಾನು ಮಾಡುತ್ತಿದ್ದ ದುರಂತ ಪಾತ್ರಗಳು ನನಗೆ ಅರಿವಿಲ್ಲದೆಯೇ ವಾಸ್ತವ ಬದುಕಿನಲ್ಲಿ ಬೇಟೆಯಾಡ ತೊಡಗಿದ್ದವು. ನಾನು ಖ್ಯಾತಿಯ ಉತ್ತುಂಗದಲ್ಲಿ ವಿಹರಿಸುತ್ತಿದ್ದೆ. ಹೆಜ್ಜೆ ಹೆಜ್ಜೆಗೂ ಆದರದ ಸ್ವಾಗತಗಳು ನನ್ನದಾಗಿರುತ್ತಿದ್ದವು. ಸಿನಿಮಾ ರಂಗದ ಗಣ್ಯರು, ಅತ್ಯಂತ ದೊಡ್ಡ ಶ್ರೀಮಂತ ಉದ್ಯಮಿಗಳು ನನ್ನೊಂದಿಗೆ ಮಾತನಾಡಲು ಕಾತರಿಸುತ್ತಿದ್ದರು. ಮಾಧ್ಯಮದವರು ನನ್ನೆರಡು ಮಾತುಗಳಿಗಾಗಿ, ಸಂದರ್ಶನಕ್ಕಾಗಿ ಗಂಟೆಗಟ್ಟಲೆ ಕಾಯುತ್ತಿದ್ದರು. ಸದಾ ಚಿತ್ರೀಕರಣದಲ್ಲಿ ವ್ಯಸ್ತಳಾಗಿರುತ್ತಿದ್ದೆ. ಬಣ್ಣ ಹಚ್ಚುವುದು ಚಿತ್ರರಂಗದಲ್ಲಿರುವವರೆಲ್ಲಾ ದೊಡ್ಡ ವ್ಯಾಧಿಯಾಗಿರುತ್ತದೆಂಬುದರ ಅರಿವು ಸ್ವತಃ ನನಗೆ ಆಗತೊಡಗಿತ್ತು. ಕೇವಲ ಇಪ್ಪತ್ತು ವರ್ಷ ವಯಸ್ಸಿಗೆ ನಾನು... ಓ ಮೈ ಗಾಡ್!

'ನಿನ್ನನ್ನು ಪ್ರೀತಿಸುತ್ತೇನೆ ತುಂಬಾ ತುಂಬಾ....' ಅರೆ! ನನ್ನನ್ನು ಉದ್ದೇಶಿಸಿದ ಮಾತುಗಳಿವು. ನಾನು ರೋಮಾಂಚಿತಳಾಗಿದ್ದೆ. ನನ್ನಲ್ಲಿ ನಾನೇ ಹಗುರವಾಗಿ ಬಾನಿನಲ್ಲಿ ತೇಲಾಡತೊಡಿದ್ದೆ. ಪ್ರೀತಿ! ಹಾಗೆಂದರೇನು? ಇದುವರೆಗೂ ನನ್ನನ್ನು ಯಾರೂ ಪ್ರೀತಿಸಿರಲಿಲ್ಲ. ಅಪ್ಪ, ಅಮ್ಮ, ಸಹೋದರಿಯರು.... ಅವರ ಪ್ರೀತಿಯೇ ಬೇರೆಯಾಗಿತ್ತು. ಅವರೆಲ್ಲರ ಪ್ರೀತಿ ನನ್ನ ದುಡಿಮೆಯ ಮೂಲವಾಗಿತ್ತು. ಪ್ರೀತಿ ಯಾವುದಕ್ಕೆ ಸಂಬಂಧಿಸಿದ್ದು? ದೇಹಕ್ಕೋ, ಮನಸ್ಸಿಗೋ, ಹೃದಯಕ್ಕೋ? ಪ್ರೀತಿಗೆ ವಯಸ್ಸು, ಜಾತಿ, ಬಣ್ಣ, ಭಾಷೆ ಯಾವುಗಳ ಭೇದ ಭಾವಗಳೂ ಇಲ್ಲ. ಹಾಗಾದರೆ ಆತ ನನ್ನನ್ನು ಪ್ರೀತಿಸುವೆನೆಂದು ಹೇಳಿದ್ದಕ್ಕೆ ನಾನು ರೋಮಾಂಚನಗೊಂಡಿದ್ದಾರೂ ಏಕೆ?


'ನೀನು ನನ್ನ ಹೃದಯವನ್ನು ಕದ್ದು ಬಿಟ್ಟೆ...' ಆತ ಮತ್ತೊಮ್ಮೆ ನುಡಿದಿದ್ದ. ನನಗಿಂತಲೂ ಹದಿನೆಂಟು ವರ್ಷ ದೊಡ್ಡವನು. ಅನೇಕ ಸಿನಿಮಾಗಳಲ್ಲಿ ನಟಿಸಿ ಹೆಸರು ಗಳಿಸಿದ್ದ ನಾಯಕ. ಹಲವಾರು ಸಿನಿಮಾಗಳನ್ನು ನಿರ್ದೇಶಿಸಿ ಯಶಸ್ವಿ ನಿರ್ದೇಶಕ ಅನ್ನಿಸಿದ್ದ. ನಾನು ಅವನ ಹೃದಯವನ್ನು ಕದಿಯುವುದೆಂದರೇನು? ಪ್ರೀತಿ ಬಚ್ಚಿಟ್ಟು ಕೊಂಡಿರುವುದೇ ಹೃದಯದಲ್ಲಿ.

'ನಾನು ಖಂಡಿತವಾಗಿಯೂ ಕಳ್ಳಿಯಲ್ಲ. ಅತ್ಯಂತ ಬಡತನದ ಸಮಯದಲ್ಲೂ ಒಂದೇ ಒಂದು ಸಣ್ಣ ವಸ್ತುವನ್ನು ಕದ್ದವಳಲ್ಲ....' ನಾನು ನಿಜವನ್ನೆ ಹೇಳಿದ್ದೆ ನಗುತ್ತಾ ಮುಂಗುರುಳನ್ನು ನೇವರಿಸಿಕೊಳ್ಳುತ್ತಾ.

'ತಮಾಷೆ ಮಾಡಬೇಡ. ನನ್ನ ಹೃದಯದ ತುಂಬಾ ನಿನ್ನನ್ನೇ ತುಂಬಿಕೊಂಡಿರುವೆ....' ಆತ ಪ್ರೀತಿಯ ಅಮಲಿನಲ್ಲಿ ಕನವರಿಸಿಕೊಳ್ಳುತ್ತಿದ್ದ.

'ಒಂದು ಹಿಡಿಯಷ್ಟು ಇರುವ ಹೃದಯದಲ್ಲಿ ನನ್ನನ್ನು ತುಂಬಿಕೊಳ್ಳಲು ಸಾಧ್ಯವಾ...? ಒಂದು ವೇಳೆ ಹಾಗೆ ತುಂಬಿಕೊಂಡಿದ್ದರೆ ನನ್ನನ್ನು ಕದ್ದ ಕಳ್ಳರಾಗಿ ಬಿಡುತ್ತೀರಿ ನೀವು ಕಂಪ್ಲೇಂಟ್ ಕೊಡುತ್ತೇನೆ ಪೊಲೀಸರಿಗೆ...'

ಆತ ನಕ್ಕು ನಕ್ಕು ಸುಸ್ತಾಗಿದ್ದ. ಆತನೇ ಅಮ್ರೋಹಿ. 'ನಿನು ನನ್ನ ದೇವತೆ...' ಶೂಟಿಂಗ್ ಸಮಯದಲ್ಲಿ ಆತ ನನ್ನ ಕಿವಿಯಲ್ಲಿ ಉಸುರುತ್ತಿದ್ದ ಮಾತುಗಳಿಂದ ಮೈನವಿರೇಳುತ್ತಿತ್ತು. ಆತನ ಔದಾರ್ಯದ ಮಾಧುರ್ಯದ ಕಡಲಲ್ಲಿ ಮುಳುಗಿ ಹೋಗಿದ್ದೆ. ಆತನ ಪ್ರೀತಿಗೆ ಸೋತು ಹೋಗಿದ್ದೆ. ಸೋತು ಹೋಗುವುದೆಂದರೆ ಪ್ರೀತಿಸುವುದೆಂದೇ ಅರ್ಥ. ಆದರೆ ಆತ ನನಗಿಂತಲೂ ಹದಿನೆಂಟು ವರ್ಷ ದೊಡ್ಡವನಾಗಿದ್ದ. ನಮ್ಮಿಬ್ಬರದು ನಟನೆಯೇ ಅನ್ನಿಸುತ್ತಿರಲಿಲ್ಲ. ಬಿಡುವಿನ ವೇಳೆಯಲ್ಲಿ ಗಂಟೆಗಟ್ಟಲೇ ಫೋನಿನಲ್ಲಿ ಮಾತನಾಡುತ್ತಿದ್ದೆವು.



'ನಾವಿಬ್ಬರು ಮದುವೆಯಾಗೋಣ. ನೀನಿಲ್ಲದೆ ನಾನು ಬದುಕಲಾರೆ....' ಆತ ಬೇಡಿಕೊಂಡಿದ್ದ. ಆತನಿಗೆ ಈಗಾಗಲೇ ಮದುವೆಯಾಗಿತ್ತು. ಹೆಂಡತಿಯಿದ್ದಳು, ಮಕ್ಕಳಿದ್ದರು. ಆದರೂ ಅಮ್ರೋಹಿ ನನ್ನಲ್ಲಿ ಇನ್ನಿಲ್ಲದಷ್ಟು ಮೋಹಗೊಂಡಿದ್ದ. ಆತನನ್ನು ಮದುವೆಯಾಗಲು ನಾನು ತೀರ್ಮಾನಿಸಿದ್ದೆ. ಈ ವಿಷಯವನ್ನು ಅಪ್ಪನಿಗೆ ಹೇಳಲಿಲ್ಲ. ಅದೊಂದು ದಿನ ಆತನೊಂದಿಗೆ ಪ್ರತ್ಯೇಕವಾಗಿ ಇರಲು ಪ್ರಾರಂಭಿಸಿಬಿಟ್ಟೆ.

ನಿಜಕ್ಕೂ ಅಮ್ರೋಹಿ ನನ್ನ ಮೇಲೆ ಹುಚ್ಚು ಪ್ರೀತಿಯನ್ನು ಹರಿಸಿದ್ದ. ನನ್ನ ಮಟ್ಟಿಗೆ ಆತ ನೊಂದ ಮಾನವೀಯತೆಯ ಕಡಲಾಗಿದ್ದ. ನನ್ನಲ್ಲಿನ ಅಗಾಧವಾದ ಪ್ರತಿಭೆಯನ್ನು ಗುರುತು ಹಚ್ಚಿ ಗೌರವಿಸಿದ್ದ. ಚಿಕ್ಕಂದಿನಲ್ಲಿ ಅಪ್ಪ ನನ್ನನ್ನು ಶಾಲೆಯಿಂದ ಬಿಡಿಸಿದ್ದ. ಅಕ್ಷರ ಕಲಿಯಬೇಕೆಂಬ ನನ್ನ ದಾಹಕ್ಕೆ ಅಮ್ರೋಹಿ ನೀರುಣಿಸಿದ್ದ ಮನೆಗೇ ಅಧ್ಯಾಪಕರನ್ನು ಕರೆಸಿ ಇಂಗ್ಲಿಷ್, ಹಿಂದಿ, ಉರ್ದು ಭಾಷೆಗಳನ್ನು ವ್ಯಾಕರಣ ಸಮೇತ ಕಲಿಸಿದ್ದ. ನಾನು ಕವಿತೆಗಳನ್ನು ಬರೆವಷ್ಟರಮಟ್ಟಿಗೆ ಭಾಷೆಗಳನ್ನು ಕಲಿತಿದ್ದೆ. ಈ ಹೊತ್ತಿಗೆ ನನ್ನದೆಯಲ್ಲಿ ಒಂಟಿತನ ನಿರಾಸೆಗಳು ಮೊಳಕೆಯೊಡೆದಿದ್ದವು. ಸಿನಿಮಾ ನಾಯಕನಾಗಿದ್ದರೂ, ನಿರ್ದೇಶಕನಾಗಿದ್ದರೂ ಅಮ್ರೋಹಿ ಕೂಡ ಎಲ್ಲಾ ಗಂಡಸರಂತೆ ಎಂಬುದನ್ನು ಕಂಡುಕೊಳ್ಳಲು ನನಗೆ ಹೆಚ್ಚು ಕಾಲ ಹಿಡಿಸಲಿಲ್ಲ. ಮಗು ಬೇಕೆಂಬ ನನ್ನ ಬಯಕೆಯನ್ನು ತಿರಸ್ಕರಿಸಿದ್ದ.

ಮೇಕಪ್ ರೂಮಿನಲ್ಲಿ ಕೂಡ ಬೇರೆ ಗಂಡಸರಿದ್ದರೆ ಆತ ಸಹಿಸುತ್ತಿರಲಿಲ್ಲ. ಐಷಾರಾಮಿ ಬಂಗಲೆ, ಮರ್ಸಿಡಿಸ್ ಕಾರುಗಳು ನನ್ನಲ್ಲಿ ಖುಷಿಯನ್ನು ತುಂಬಲು ಸೋತಿದ್ದವು. ಒಂಟಿಯಾಗಿರಬೇಕೆನಿಸುತ್ತಿತ್ತು. ಸಿನಿಮಾ ಕಾರ್ಯಕ್ರಮಗಳಲ್ಲಿ, ಪಾರ್ಟಿಗಳಲ್ಲಿ ನಾನು ಅಪ್ಪಟ ಬಿಳಿ ಉಡುಪುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದೆ. ಅದು ನಾನು ಮೌನವನ್ನು, ಒಂಟಿತನವನ್ನು ಬಯಸುವುದರ ಸಂಕೇತವಾಗಿತ್ತು. ಹೃದಯ, ಮನಸ್ಸುಗಳಲ್ಲಿ ಬಿರುಕುಂಟಾದರೆ ದೇಹಗಳು ಒಂದಕ್ಕೊಂದು ಅಸಹ್ಯಪಡುತ್ತವೆ. ರಾತ್ರಿಗಳಲ್ಲಿ ನಿದ್ದೆ ಅಪಹರಣವಾಗ ವಾಗತೊಡಗಿತ್ತು. ಅಂಥ ಸಂದರ್ಭದಲ್ಲಿ ಒಮ್ಮೆ ನನಗೆ ವಿಪರೀತ ಥಂಡಿಯಾಗಿತ್ತು. ಅಮ್ರೋಹಿ ಪ್ರಸಿದ್ಧ ಡಾಕ್ಟರನ್ನು ಕರೆದುಕೊಂಡು ಬಂದಿದ್ದರು. 'ಥಂಡಿಗೆ ಅಷ್ಟು ಹೆದರುವ ಪ್ರಮೇಯ ಇಲ್ಲವೆಂದೇನೂ ನಾನು ಹೇಳುತ್ತಿಲ್ಲ. ಥಂಡಿಗೆ ಒಂದು ಪೆಗ್ ಬ್ರಾಂದಿ ಕುಡಿದರೆ ಒಳ್ಳೆಯದು. ಬ್ರಾಂದಿ ಥಂಡಿ ದೇಹವನ್ನು ಬೆಚ್ಚಗೆ ಮತ್ತು ಆಹ್ಲಾದಕರವಾಗಿರುತ್ತದೆ...' ಎಂದಿದ್ದರು ನಗುತ್ತಾ ಡಾಕ್ಟರು. ಅಂದು ರಾತ್ರಿ ಬೇಡ ಬೇಡವೆಂದರೂ ಕೇಳದೆ ಅಮ್ರೋಹಿ ಬಲವಂತವಾಗಿ ಒಂದು ಪೆಗ್ ಬ್ರಾಂದಿಯನ್ನು ಕುಡಿಸಿದ್ದರು ಅಷ್ಟೇ, ಅದ್ಯಾಕೋ ನನ್ನ ಮನಸ್ಸು, ದೇಹಗಳೆರಡೂ ಕುಡಿತವನ್ನು ವಿಪರೀತವಾಗಿ ಇಷ್ಟಪಡಲಾರಂಭಿಸಿದವು. ನಾನು ಪ್ರತಿನಿತ್ಯವೂ ಕುಡಿಯುತ್ತಿದ್ದೆ. ಕದ್ದು ಕುಡಿಯುತ್ತಿದ್ದೆ. ವಿಪರೀತ ಕುಡಿಯುತ್ತಿದ್ದೆ. ಇದು ಅಮ್ರೋಹಿ ಮತ್ತು ನನ್ನ ನಡುವಿನ ಸಂಬಂಧವನ್ನು ತುಂಬಾ ಬಿಗಡಾಯಸುವಂತೆ ಮಾಡಿಬಿಟ್ಟಿತ್ತು. ಅಮ್ರೋಹಿ ನನ್ನ ಬದುಕಿನಲ್ಲಿ ಪ್ರವೇಶ ಮಾಡದೇ ಇದ್ದಿದ್ದರೆ ನಾನು ಬದುಕಿನಲ್ಲಿ ತುಂಬಾ ಸಂತೋಷ ಸಡಗರಗಳಿಂದ ಇರುತ್ತಿದ್ದೆನೇನೋ. ಸಣ್ಣ ಸಣ್ಣ ವಿಷಯಕ್ಕೂ ನಾವು ಒಬ್ಬರಿಗೊಬ್ಬರಿಗೆ ಅಸಹ್ಯಪಡತೊಡಗಿದೆವು! ಅಮ್ರೋಹಿ ಕುರಿತು ನನ್ನ ಹೃದಯದೊಳಗಿದ್ದದ್ದನ್ನು ಕವಿತೆಗಳನ್ನಾಗಿ ಬರೆದಿದ್ದೆ.

'ನಾನು ನನ್ನ ಹೃದಯದಂತಹ ಒಬ್ಬ ಸಂಗಾತಿಯನ್ನು ಪಡೆದರೂ ಅವನೊಂದಿಗೆ ಅಷ್ಟೇ ದುಃಖವನ್ನು ಅವಮಾನವನ್ನು ನನ್ನದಾಗಿಸಿಕೊಂಡೆ'

'ನೀನು ಯಾಕೆ ನನ್ನ ಕಥೆಯನ್ನು ಕೇಳುತ್ತೀಯ ನನ್ನ ಕಥೆ ವರ್ಣರಹಿತ ಸಂಭ್ರಮರಹಿತ ಚಿಟ್ಟೆಯೊಂದರ ರೆಕ್ಕೆಗಳಂತೆ....'

'ನೀನು ನನಗೆ ನನ್ನ ಪ್ರೀತಿಗೆ, ನನ್ನ ಬದುಕಿಗೆ ವಿದಾಯ ಹೇಳುತ್ತಿದ್ದೀಯ. ಕ್ರೋಧ ತುಂಬಿಕೊಂಡು ಕಣ್ಣುಗಳಲ್ಲಿ ನನ್ನ ಯೌವ್ವನ, ರೂಪ, ಸಂಪತ್ತನ್ನೂ ಹಿಂತಿರುಗಿಸಿ ಹೋಗು....'

ನನ್ನ ಅಂತರ್ಯದ ಕೂಗು ಆತನಿಗೆ ಕೇಳಿಸಲೇ ಇಲ್ಲ. ಈ ಸಂದರ್ಭದಲ್ಲಿಯೇ ನನ್ನ ಬದುಕಿನಲ್ಲಿ ಧರ್ಮ ಪ್ರವೇಶ ಮಾಡಿದ್ದು. ಆತ ಯುವ ನಾಯಕನಾಗಿ ಬಣ್ಣದ ಪ್ರಪಂಚ ಪ್ರವೇಶಿಸಿದಾಗ ನಾನು ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದೆ. ಅಭಿನಯವನ್ನು ಹೇಳಿಕೊಟ್ಟಿದ್ದೆ, ಚಿತ್ರಗಳಲ್ಲಿ ನಟಿಸಲು ಅವಕಾಶಗಳನ್ನು ಕೊಡಿಸಿದ್ದೆ. ನನಗೆ ಅರಿವಿಲ್ಲದೆಯೇ ಆತನ ಪ್ರೀತಿಯ ತೆಕ್ಕೆಯಲ್ಲಿ ಬಿದ್ದಿದ್ದೆ. ಆತನೂ ನನ್ನನ್ನು ಪ್ರೀತಿಸಿದ ಅತಿಯಾಗಿ ಆತನಿಗೂ ಮದುವೆಯಾಗಿತ್ತು. ಹಾಗಾಗಿ ನನ್ನ ಪ್ರೀತಿ ಆತನಲ್ಲಿಯೂ ನೆಲೆ ನಿಲ್ಲಲಿಲ್ಲ. ಬಹುಶಃ ಬಣ್ಣದ ಪ್ರಪಂಚದಲ್ಲಿ ಪ್ರೀತಿ, ಪ್ರೇಮ, ಸಂಬಂಧಗಳಿಗೆ ಅರ್ಥಗಳನ್ನು ಹುಡುಕಲು ಸಾಧ್ಯವೇ ಇಲ್ಲವೇನೋ. ಕಡೆಗೆ ಧರ್ಮನೂ ದೂರವಾದ, ಅಮ್ರೋಹಿಯೊಂದಿಗೆ ಮರು ಮದುವೆಯೂ ಆಯಿತು. ಆತನೊಂದಿಗೆ ಕೊನೆಯ ಸಿನಿಮಾ ಮಾಡಲು ಒಪ್ಪಿಕೊಂಡೆ. ಆದರೆ ಈ ವೇಳೆಗೆ ನನಗೆ ಮನುಷ್ಯರ ಮೇಲೆ ನಂಬಿಕೆಯೇ ಹೊರಟು ಹೋಗಿತ್ತು, ನನ್ನ ಮೇಲೆ ಕೂಡ.

ಓ ಬೆಳಕಿನ ಲಾಂದ್ರವೇ, ನನ್ನ ಬದುಕಿನಲ್ಲಿ ಬೆಳಕು ಕ್ಷೀಣಿಸತೊಡಗಿತ್ತು. ನಾನು ಒಂಟಿತನ ಮತ್ತು ಕತ್ತಲನ್ನು ಹೆಚ್ಚು ಹೆಚ್ಚು ಪ್ರೀತಿಸತೊಡಗಿದ್ದೆ; ಅದಕ್ಕಿಂತಲೂ ಹೆಚ್ಚಾಗಿ ಮತ್ತು ತರಿಸುವ ಮದ್ಯವನ್ನು. ಅನೇಕ ಚಿತ್ರಗಳಲ್ಲಿ ಮದ್ಯವಸನಿ ಹೆಣ್ಣಾಗಿ ಅಮೋಘವಾದ ಅಭಿನಯವನ್ನು ನೀಡಿದ್ದ ನಾನು ವಾಸ್ತವ ಬದುಕಿನಲ್ಲೂ ದೊಡ್ಡ ಮದ್ಯವ್ಯಸನಿಯಾಗಿಬಿಟ್ಟಿದ್ದೆ. ಬಣ್ಣದ ವ್ಯಸನ ದೂರವಾಗತೊಡಗಿತು. ಕ್ರಮೇಣ ಎಲ್ಲರೂ ನನ್ನಿಂದ ದೂರವಾದರು. ನನ್ನ ಅದ್ಭುತವಾದ ಬಣ್ಣದ ಲೋಕ ಮಂಜಿನಂತೆ ಕರಗಿ ಹೋಗಿತ್ತು. ನನ್ನ ಸಂಪತ್ತು ಕೂಡ ಕರಗಿ ಹೋಗಿತ್ತು.

ಕೇವಲ ನಲವತ್ತು ವರ್ಷ ವಯಸ್ಸಿಗೇ ನನ್ನ ಯೌವ್ವನ ಕಳಚಿಕೊಂಡಿತ್ತು.

'ಥೂ ಚಿನಾಲಿ....'

'ಥೂ ನಾಯಿ....'

'ದೂರ ಹೋಗು ಗೀಜು ಹೆಣ್ಣೆ....'

'ಫುಟ್‌ಪಾತ್ ಎಂಬುದು ಮರೆತಂತಿದೆ....'

'ಈ ಮುಂಬಯಿಯ ಬೀದಿಗಳಲ್ಲಿ ಯಾರೂ ದೊಡ್ಡವರಲ್ಲ....'

ಬೇಡ ಬೇಡವೆಂದರೂ ಧ್ವನಿಗಳು ಕಿವಿಗೆ ಅಪ್ಪಳಿಸುತ್ತಿವೆ. ನಾನು ಈಗಲೂ ಹೆಣ್ಣು ಯೌವ್ವನವಿಲ್ಲದ, ರೂಪವಿಲ್ಲದ, ಪರಿಮಳವಿಲ್ಲದ ಹೆಣ್ಣು, ನನಗೀಗ ಕನಸುಗಳು ಬೇಕು.

ನಾನೀಗ ಬಣ್ಣದ ರಾಟೆಯನ್ನು ತಿರುಗಿಸಬೇಕು ಹಿಂದಕ್ಕೆ.... ಎಲ್ಲಕ್ಕಿಂತಲೂ ಹೆಚ್ಚಾಗಿ ನನಗೊಂದು ಪೆಗ್ ಬ್ರಾಂದಿ ಬೇಕು. ಕಳ್ಳ ಚಂದ್ರಮ, ನೀನೂ ಓಡಿ ಹೋಗುತ್ತಿರುವೆ. ದೂರ ದೂರ ನನ್ನ ಕಣ್ಣುಗಳಲ್ಲಿ ಕತ್ತಲು ತುಂಬಿಕೊಳ್ಳುತ್ತಿದೆ. ಕಾಲುಗಳು ತತ್ತರಿಸುತ್ತಿವೆ. ನನ್ನ ದೇಹ ಫುಟ್‌ಪಾತ್ ಮೇಲೆ ಒರಗುತ್ತಿದೆ. ನನ್ನ ಪ್ರಜ್ಞೆ ಕಳಚಿಕೊಳ್ಳುತ್ತಿದೆ. ಬಣ್ಣದ ಚಿತ್ರ ಕೀಲು ಮುರಿದು ನಿಂತಿದೆ. ಮುಂದೆ ....! ಕಣ್ಣೀರು ಮತ್ತು ಹೆಣ್ಣು ಅವಳಿ ಜವಳಿಗಳಿದ್ದಂತೆ. ಹುಟ್ಟಿನಿಂದ ಸಾಯುವವರೆಗೂ ಜೊತೆ ಜೊತೆಯಲ್ಲಿಯೇ.